ಎ) ವಿಷಯ : ಚಿತ್ರದುರ್ಗದಲ್ಲಿ ಪತ್ರಕರ್ತರಿಗೆ ರಕ್ಷಣೆ ನೀಡುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾ) : ಮಾನ್ಯ ಸಭಾಧ್ಯಕ್ಷರೆ, ನಾನು ಇಲ್ಲಿ ಪ್ರಸ್ತಾಪ ಮಾಡುವ ವಿಷಯವೇನೆಂದರೆ, ಚಿತ್ರದುರ್ಗದಲ್ಲಿ ಅಲ್ಲಿಯ ಎಂಪಿಯವರು, ಮಾನ್ಯ ಸಚಿವರು ಪತ್ರಿಕಾಗೋಷ್ಠಿ ಮಾಡುವಂತಹ ಸಂದರ್ಭದಲ್ಲಿ ಅಲ್ಲಿಯ ಪತ್ರಿಕಾಕರ್ತರಿಗೆ....

ಅಧ್ಯಕ್ಷರು : ಯಾವ ಸಚಿವರು ಸ್ವಾಮಿ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂಜುನಾಥ್‌ರವರು ಇದ್ದರು, ಆ ಸಂದರ್ಭದಲ್ಲಿ ಪತ್ರಿಕೊಗೋಷ್ಠಿಯಲ್ಲಿ

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಲೋಕಸಭಾ ಸದಸ್ಯರು ಹೀಗೆ ಮಾಡಿದ್ದಾರೆಂದು ಅವರ ಮೇಲೆ ಒಂದು ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನ ಮಾಡುತ್ತಿದ್ದಾರೆ, ಅವರು ನಿಂತು ಈ ಸದನದಲ್ಲಿ ಡಿಫೆಂಡ್ ಮಾಡಿಕೊಳ್ಳುವಂತಿಲ್ಲ, ಅವರು ಇನ್ನೊಂದು ಉನ್ನತವಾಗಿರುವಂತಹ ಸಮಿತಿಯ ಸದಸ್ಯರೂ ಹೌದು. ಹಾಗೆ ಇರುವಾಗ, ಒಬ್ಬ ಪಾರ್ಲಿಮೆಂಟ್ ಸದಸ್ಯರ ವರ್ತನೆ ಕುರಿತು ಅದೇನೆ ಇರಲಿ, ತಾವು ಹೇಳುವುದು ಸತ್ಯವೊ ಅಥವಾ ಸುಳ್ಳೊ ಅದು ಬೇರೆ, ಅವರ ಬಗ್ಗೆ ತಾವು ಇಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ. ಆದುದರಿಂದ ದಯಮಾಡಿ ಆ ಲೋಕಸಭಾ ಸದಸ್ಯರ ವಿರುದ್ಧ ಅವರೇನು ಹೇಳುತ್ತಾರೆ ಅದಕ್ಕೆ ಅವಕಾಶ ಕೊಡುವಂತಹದ್ದು ನಿಯಮಾಬಾಹಿರವಾಗುತ್ತದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಎಂಪಿಯವರ ಬಗ್ಗೆ ನಾನೇನೂ ಮಾತನಾಡುತ್ತಿಲ್ಲ, ಈ ಸದನದ ಸದಸ್ಯರಾದಂತಹ ಮಾನ್ಯ ಮಂಜುನಾಥ್‌ರವರು ಅಲ್ಲಿದ್ದರು, ಅವರ ಮುಂದೆ ಇದೆಲ್ಲಾ ನಡೆದಂತಹ ಘಟನೆ. ಪತ್ರಿಕಾಗೋಷ್ಠಿಯಾದ ಮೇಲೆ ಕೆಲವು ಜನ ಹೋಗಿ ಆ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿರುವುದರ ಬಗ್ಗೆ, ಹಿಂದು ಪತ್ರಿಕೆಯ ಪತ್ರಕರ್ತರ ಮೇಲೆ....

ಅಧ್ಯಕ್ಷರು : ಮಾನ್ಯ ಲೋಕಸಭಾ ಸದಸ್ಯರು, ಈ ಸದನದಲ್ಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾನು ಎಂಪಿಯವರ ಬಗ್ಗೆ ನಾನೇನೂ ಮಾತನಾಡುತ್ತಿಲ್ಲ. ಇವತ್ತು ಆ ಪತ್ರಕರ್ತರ ಮೇಲೆ ಬೇರೆ ಬೇರೆ ರೀತಿಯಾಗಿ ನಡೆಯುತ್ತಿದೆ, ಒಬ್ಬ ರಾಜಕಾರಣಿ, ನಾನು ಜನಪ್ರತಿನಿಧಿ....

ಶ್ರೀ ಹೆಚ್.ಕೆ. ಪಾಟೀಲ್ : ಅಧ್ಯಕ್ಷರೆ, I am on a point of order. ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಏನು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ, ಅದನ್ನು ಯಾವುದೇ ನಿಯಮಾವಳಿಯಡಿಯಲ್ಲಿ ಎತ್ತುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಬರುವುದಿಲ್ಲ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ತಾವು ನನ್ನನ್ನು ಕರೆದಿದ್ದೀರಿ, ನಾನು ಇನ್ನು ವಿಷಯವನ್ನು ಪ್ರಸ್ತಾಪ ಮಾಡೇ ಇಲ್ಲ.

ಅಧ್ಯಕ್ಷರು : ಅವರು ಎತ್ತಿರುವುದು It is a fundamental.....

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅವರು ಈ ಸದನದ ಸದಸ್ಯರಲ್ಲ, ಅವರ ಬಗ್ಗೆ ನಾನೇನೂ ಮಾತಾನಾಡುತ್ತಿಲ್ಲ.

ಅಧ್ಯಕ್ಷರು : ನೀವು ಅವರ ಹೆಸರನ್ನು ಎತ್ತಬೇಕಾದರೆ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. You have to adhere to it.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಯಾರು ಕೆಲವೊಂದು ವ್ಯಕ್ತಿಗಳು ಹೋಗಿ ಆ ವ್ಯಕ್ತಿಗಳು ಹೋಗಿ ಆ ಪತ್ರಕರ್ತರ ಮನೆಗೆ ಹೋಗಿ ಧಮಕಿ ಹಾಕಿ ಈ ರೀತಿ ಪ್ರಶ್ನೆಗಳನ್ನು ಕೇಳುತ್ತೀರೋ ಹೇಗೆ ? ಆ ರೀತಿ ಕೇಳುತ್ತೀರಾ ಎಂದು ಧಮಕಿ ಹಾಕುವ ಪ್ರವೃತ್ತಿ ಇದು ಸರಿಯಲ್ಲ. ನಾಳೆ ಪತ್ರಕರ್ತರು ಒಂದು ಸರಿಯಾದ ರೀತಿಯಲ್ಲಿ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕೆ ಇದು ಅಡೆತಡೆಯಾಗುತ್ತದೆ. ಇವತ್ತು ಕನ್ನಡಪ್ರಭ ಪತ್ರಿಕೆ, ಹಿಂದೂ ಪತ್ರಿಕೆ ಇರಬಹುದು. ಇವತ್ತು ಕೆಲವು ಪತ್ರಿಕೆಗಳು ಇದ್ದಾವೆ. ಅವರ ಬಗ್ಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಆಗಲೇ ಮಾತನಾಡಿದರು. ಅಂಥ ಕೆಲವೊಂದು ಪತ್ರಕೆಗಳಿದ್ದಾವೆ. ಅಂಥವುಗಳನ್ನು condemn ಮಾಡಲೇಬೇಕಾಗುತ್ತದೆ. ಇವತ್ತು ರೆಪ್ಯೂಟೆಡ್ ಪತ್ರಿಕೆ ಇರತಕ್ಕವರು. ಆ ಪತ್ರಕರ್ತರ ಮೇಲೆ ಈ ರೀತಿಯಾದ ಹಲ್ಲೆ ಈ ರೀತಿ ಧಮಕಿ ಮಾಡುವ ಪ್ರಸಂಗ ಬಂದರೆ ಬಹುಶಃ ನಾಳೆ ಯಾವುದೇ ಒಂದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸರಿಯಾದ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಇವತ್ತು ಅವರು ಪೋಲಿಸರ ಒಂದು ರಕ್ಷಣೆಯನ್ನು ಕೇಳಿದ್ದಾರೆ. ನಾನು ಹೆಚ್ಚಿಗೆ ವಿವರವಾಗಿ ಹೋಗುವುದಿಲ್ಲ. ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಇವತ್ತು ಆ ಪತ್ರಕರ್ತರು ಪೋಲೀಸ್ ರಕ್ಷಣೆಯನ್ನು ಕೇಳಿದ್ದಾರೆ. ಅವರಿಗೆ ರಕ್ಷಣೆ ಕೊಟ್ಟಿದ್ದಾರೋ ಹೇಗೆ? ಆ ರೀತಿ ಒಂದು ಸುರಕ್ಷಿತ ಭಾವನೆ ಮೂಡುವುದಕ್ಕೆ ಯಾವ ರೀತಿ ವಾತಾವರಣವನ್ನು ತಾವು ನಿರ್ಮಾಣ ಮಾಡಿದ್ದೀರಿ? ಇದನ್ನು ಈ ಸದನಕ್ಕೆ ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಜನರಲ್ ಆಗಿ ಹೇಳಿದ್ದಾರೆ. ಜನರಲ್ ಆಗಿಯೇ ಉತ್ತರ.

ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರೇನು ಹೇಳಿದ್ದಾರೆ, ಅದನ್ನು ನಾವು ಕೇಳಿಸಿಕೊಂಡಿದ್ದೇವೆ, ಸದನದ ಗಮನಕ್ಕೂ ಕೂಡ ತಂದರು. ಲೋಕಸಭಾ ಸದಸ್ಯರ ವಿರುದ್ಧ ಅವರೇನು ಕೆಲವು ಆಪಾದನೆಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದರು. ಅದು ಸೂಕ್ತವಾದುದಲ್ಲ ಈ ಸದನದಲ್ಲಿ ಅವರು ಇಲ್ಲದೇ ಇರುವಾಗ ಅವರು ಡಿಫೆಂಡ್ ಮಾಡಿಕೊಳ್ಳತಕ್ಕ ಅವಕಾಶ ಇಲ್ಲದೇ ಇರುವಾಗ ಹಿರಿಯ ಸದಸ್ಯರಾದ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಆ ಆಪಾದನೆಯನ್ನು ಮಾಡಿರುವಂಥದ್ದು ಸೂಕ್ತವಾದುದಲ್ಲ. ನಾನು ತಮ್ಮಲ್ಲಿ ಕೋರುತ್ತೇನೆ, ಈ ರೀತಿಯಾಗಿರತಕ್ಕ ಯಾವುದೇ ಪ್ರಸ್ತಾಪ ಆಗಾಗ್ಗೆ ಆಗಬಾರದು ಎಂದಾದರೆ ಒಂದು ಆರೋಗ್ಯಕರವಾದ ಬೆಳವಣಿಗೆ ಇಲ್ಲಿ ಆಗಬೇಕಾದರೆ ಅವರೇನು ಮಾನ್ಯ ಎನ್. ವೈ. ಹನುಮಂತಪ್ಪನವರ ಹೆಸರನ್ನು ಪ್ರಸ್ತಾಪ ಮಾಡಿದರು. ಅದನ್ನು ಈ ಕಡತದಿಂದ ತೆಗೆಸಿಹಾಕಿಬಿಡಿ. ಒಂದು ವೇಳೆ ಏನಾದರೂ ಆ ಪತ್ರಕರ್ತರಿಗೆ ತೊಂದರೆಯಾಗಿದ್ದರೆ ಅದರ ಬಗ್ಗೆ ತಾವೇನಾದರೂ ಹೇಳುವುದಿದ್ದರೆ ನಮ್ಮ ತಕರಾರೇನು ಇಲ್ಲ. ಅಥವಾ ತಾವು ಅದನ್ನು ಮಾನ್ಯ ಸ್ಪೀಕರ್ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರಬಹುದು. ಅದು ಯಾವುದನ್ನೇ ಮಾಡಬಹುದು. ಆದರೆ ಈ ಸಂದರ್ಭದಲ್ಲಿ ಲೋಕಸಭಾ ಸದಸ್ಯರ ವಿರುದ್ಧ ಅವರೇನು ಆಪಾದನೆ ಮಾಡುವುದಕ್ಕೆ direct, indirect ಆಪಾದನೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ, ಅದು ಸೂಕ್ತವಾದುದಲ್ಲ. ಅದನ್ನು ಕಡತದಿಂದ ತೆಗೆದು ಹಾಕಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ.

ಅಧ್ಯಕ್ಷರು : ಹೆಸರು ಪ್ರಸ್ತಾಪ ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗ ಅವರಿಗೆ ಧಮಕಿ ಹಾಕಿದ್ದಾರೆ. ಅದರ ಬಗ್ಗೆ ಅವರು ಏನು ಹೇಳುತ್ತಾರೋ ಅದನ್ನು ಹೇಳಲಿ. ರಕ್ಷಣೆಯನ್ನು ಕೊಡುತ್ತೀರೋ ಇಲ್ಲವೋ? ಅಲ್ಲಿ ಪತ್ರಿಕಾಗೋಷ್ಠಿಯಲ್ಲಿ ಏನಾಯಿತು? ಆಮೇಲೆ ನಂತರದಲ್ಲಿ ಉಂಟಾದ ಘಟನೆಗಳು, ಅದರ ಬಗ್ಗೆ ಅವರು ರಕ್ಷಣೆ ಕೇಳಿದ್ದಾರೆ. ಇವತ್ತು ಪತ್ರಕರ್ತರು ರಕ್ಷಣೆಯನ್ನು ಕೇಳಿದ್ದಾರೆ. ಅದರ ಬಗ್ಗೆ ಏನು ಹೇಳುತ್ತಾರೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇವತ್ತು ಪತ್ರಕರ್ತರ ರಕ್ಷಣೆ ಬಗ್ಗೆ ಅವರು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಆಯಿತು ತಡೆಯಿರಿ, ಅವರು ಮಾತನಾಡುತ್ತಿದ್ದಾರೆ. ನೀವೇಕೆ ನಿಂತುಕೊಂಡ್ರಿ? ಮಧ್ಯದಲ್ಲಿ ಸುಮ್ಮನೆ ಎಲ್ಲಾ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಎಂಪಿ ಅವರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ ಇವತ್ತು ಅಲ್ಲಿಯ ಪತ್ರಕರ್ತರು ರಕ್ಷಣೆಯನ್ನು ಕೇಳಿದ್ದಾರೆ. ಎಸ್‌ಪಿ ಅವರಿಗೆ ದೂರನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ರಕ್ಷಣೆಯನ್ನು ಕೊಟ್ಟಿದ್ದೀರೋ ಇಲ್ಲವೋ ಅಥವಾ ಅವರ ಸುರಕ್ಷತೆ ಬಗ್ಗೆ ಒಂದು ವಾತಾವರಣ ನಿರ್ಮಾಣ ಮಾಡುವಂಥದ್ದನ್ನು ಮಾಡುತ್ತೀರೋ ಇಲ್ಲವೊ? ಇದರ ಬಗ್ಗೆ ಉತ್ತರವನ್ನು ಹೇಳಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕರೆ, ನನಗೂ ಕೂಡ ಈ ಸುದ್ದಿ ಬಂದಿದೆ. ಮತ್ತೆ ನಾನೂ ಕೂಡ ಮೊನ್ನೆ ಸಾಕಷ್ಟು ಪತ್ರಿಕಾ ಅಕಾಡೆಮಿ ಸಭೆಗೆಲ್ಲಾ ಹೋಗಿದ್ದೇನೆ. ಇವತ್ತು ಪತ್ರಿಕಾ ಅಕಾಡೆಮಿ ಸಭೆಯಲ್ಲಿ ಹೋದಾಗ ಪತ್ರಕರ್ತರು ರಾಜ್ಯದ ಜನರ ಅಭಿಪ್ರಾಯವನ್ನು ವ್ಯಕ್ತಪಡಿಸುವ ರೀತಿಯಲ್ಲಿ ನಿರ್ಭಯವಾಗಿ ಅವರು ಕೆಲಸಕಾರ್ಯಗಳನ್ನು ಮಾಡಬೇಕು. ಇದಕ್ಕೆ ಬಹಳಷ್ಟು ಕಡೆ ಅವರು ತೊಂದರೆಗೂ ಈಡಾಗುತ್ತಿದ್ದಾರೆ. ಅಲ್ಲಿ ಕೋಲಾರದಲ್ಲಿ ಕೂಡ ಘಟನೆ ನಡೆಯಿತು. 1983 ರಲ್ಲಿ ಕ್ರಾಂತಿ ಸಂಪಾದಕರ ಕೊಲೆ ಗುಲ್ಬರ್ಗಾದಲ್ಲಿ ಆಯಿತು. ಇವೆಲ್ಲಾ ನಿದರ್ಶನಗಳು ಇದ್ದಾವೆ. ಅದಕ್ಕಾಗಿ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಇಲ್ಲಿಗೆ ಬರುವುದಕ್ಕೆ ಮುಂಚೆ ವಿಧಾನ ಪರಿಷತ್ತಿನಲ್ಲಿ ಮಾತನಾಡಿದ್ದೇನೆ, ನಾವು ಎಲ್ಲಾ ಕಡೆಗೂ ಆದೇಶವನ್ನು ಕೊಟ್ಟಿದ್ದೇವೆ. ಡಿಜಿ ಮತ್ತು ಪೋಲೀಸ್ ಕಮೀಷನರ್‌ಗೂ ಕೂಡ ಹೇಳಿದ್ದೇವೆ. ಮತ್ತೆ ನಾವು ಪೂರ್ಣವಾದ ವರದಿಯನ್ನು ಇವತ್ತು ತರಿಸಿ ಎಲ್ಲಿ ಘಟನೆಯಾಗಿದೆ. ಪತ್ರಕರ್ತರಿಗೆ ಯಾರು ತೊಂದರೆ ಮಾಡಿದ್ದಾರೆ. ಎಲ್ಲಿ ಬಂಧಿಸಬೇಕು ಎಂಬ ಬಗ್ಗೆ ಎಲ್ಲಾ ಪರಿಶೀಲನೆ ಮಾಡುತ್ತೇವೆ ಮಾನ್ಯ ಜಗದೀಶ್ ಶೆಟ್ಟರ್‌ರವರ ಅಪೇಕ್ಷೆ ಸರ್ಕಾರದ್ದು ಇದೆ, ಅದನ್ನು ನಿಜವಾಗಿ ಕೂಡ ಮಾಡುತ್ತೇವೆ, ಮತ್ತೆ ಅದಕ್ಕೆ ನಾಳೆಯೇ ಅಥವಾ ನಾಡಿದ್ದೋ I will make a statement in the House.

(ಅಂಕೋಲ) : (ಎ) ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಜ್ಯದ ಹೆದ್ದಾರಿ ಅಭಿವೃದ್ಧಿ ಯೋಜನೆ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಕರ್ನಾಟಕ ರಾಜ್ಯದ ಹೆದ್ದಾರಿ ಅಭಿವೃದ್ಧಿ ಯೋಜನೆ, ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಪ್ಯಾಕೇಜುಗಳಲ್ಲಿ ಆಗುತ್ತಿರುವ ವಿಳಂಬ ಕುರಿತು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ